ಉ) ರಾಜ್ಯದಲ್ಲಿ ಇತ್ತೀಚಿನ ಕೋಮು ಗಲಭೆಗಳಲ್ಲಿ ನೊಂದವರಿಗೆ ನೀಡಿದ ಪರಿಹಾರ ಮೊತ್ತವೆಷ್ಟು ?

ಶ್ರೀ ಎಂ. ವೀರಪ್ಪ ಮೊಯಿಲಿ (ಮುಖ್ಯಮಂತ್ರಿಗಳು):–

ಅ) ಇಲ್ಲ

ಆ) 1) ರಾಜ್ಯಮಟ್ಟದಲ್ಲಿ ರಾಜ್ಯ ಐಕ್ಯತಾ ಸಮಿತಿ ಇದೆ. ಅದೇ ರೀತಿ ಜಿಲ್ಲಾ ಮಟ್ಟ ಹಾಗೂ ತಾಲ್ಲೂಕಾ ಮಟ್ಟದಲ್ಲಿ ಐಕ್ಯತಾ ಸಮಿತಿಗಳನ್ನು ಸ್ಥಾಪಿಸಿದೆ.

2) ಅಲ್ಪ ಸಂಖ್ಯಾತರ ಹಿತರಕ್ಷಣೆಗಾಗಿ 15 ಅಂಶಗಳ ಕಾರ್ಯಕ್ರಮ ಜಾರಿಗೊಳಿಸಲಾಗುತ್ತಿದೆ.

3) ಅಲ್ಪ ಸಂಖ್ಯಾತರ ಆಯೋಗವು ಅವರ ಸಮಸ್ಯೆಗಳನ್ನು ಗುರುತಿಸಿ, ಪರಿಹಾರ ಸೂಚಿಸುವುದು.

4) ಅಲ್ಪ ಸಂಖ್ಯಾತರ ಆರ್ಥಿಕ ಅಭಿವೃದ್ಧಿ ಕ್ರಮಗಳು.

5) ಇತ್ತೀಚಿನ ಮತೀಯ ಗಲಭೆಗಳ ಹಿನ್ನೆಲೆಯಲ್ಲಿ ದಿನಾಂಕ: 25–1–93ರಿಂದ 30–1–93ರವರೆಗೆ ಕೋಮು ಸೌಹಾರ್ದ ಸಪ್ತಾಹ ಆಚರಿಸಿ ಅನೇಕ ವಿಧಾಯಕ ಕಾರ್ಯಕ್ರಮವನ್ನು ನಡೆಸಲಾಯಿತು.

ಇ) ಹೌದು

ಈ) 2749

ಉ) ಇಲ್ಲಿಯವರೆಗೆ, ರೂ. 2,28,65,900–00 ಗಳನ್ನು ನೀಡಲಾಗಿದೆ. ಮೃತಪಟ್ಟ ವ್ಯಕ್ತಿಗಳ ಸಂಬಂಧಿತರಿಗೆ ತಲಾ ಒಂದು ಲಕ್ಷ ರೂಪಾಯಿಗಳ ಹೆಚ್ಚುವರಿ ಪರಿಹಾರ ಧನ ನೀಡಲು ಆದೇಶಿಸಲಾಗಿದೆ.

ಕರ್ನಾಟಕ ಸರ್ಕಾರಿ ವಿಮಾ ಇಲಾಖೆಯಲ್ಲಿನ ನೌಕರರ ಸಂಖ್ಯೆ

202 (905) ಶ್ರೀ ಹೆಚ್.ಎಂ. ರೇವಣ್ಣ (ಮಾಗಡಿ):–

ಹಣಕಾಸಿನ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಕರ್ನಾಟಕ ಸರ್ಕಾರಿ ವಿಮಾ ಇಲಾಖೆಯಲ್ಲಿರವ ನೌಕರರ ಸಂಖ್ಯೆ ಎಷ್ಟು ? ಪ್ರೋರೇಟಾ ಆಧಾರದ ಮೇಲೆ ಬೇಕಾಗಿರುವ ಸಿಬ್ಬಂದಿ ಎಷ್ಟು; ಸಿಬ್ಬಂದಿ ನೇಮಕ ಮಾಡದಿರಲು ಕಾರಣಗಳೇನು;

ಆ) ಈ ಇಲಾಖೆಯಲ್ಲಿ ಕಂಪ್ಯೂಟರೀಕರಣವನ್ನು ಪ್ರಾಯೋಗಿಕವಾಗಿ ಅಳವಡಿಸಿ ವಿಫಲವಾಗಿರುವುದು ನಿಜವಲ್ಲವೆ;

ಇ) ಹಾಗಿದ್ದಲ್ಲಿ, ಕೊರತೆ ಇರುವ ಸಿಬ್ಬಂದಿಯನ್ನು ಕೂಡಲೇ ಭರ್ತಿ ಮಾಡಲು ಸರ್ಕಾರದವರು ಕ್ರಮ ಕೈಕೊಳ್ಳುವರೆ ?

ಶ್ರೀ ರಾಮಲಿಂಗಾ ರೆಡ್ಡಿ (ಹಣಕಾಸಿನ ರಾಜ್ಯ ಸಚಿವರು):–

ದಿನಾಂಕ 31–1–1993ರಲ್ಲಿ ಕರ್ನಾಟಕ ಸರ್ಕಾರಿ ವಿಮಾ ಇಲಾಖೆಯಲ್ಲಿ 891 ನೌಕರರು: ಅಧಿಕಾರಿಗಳ ಕಾರ್ಯ ನಿರ್ವಹಿಸುತ್ತಿದ್ದಾರೆ. ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ (ಆಡಳಿತ ಸುಧಾರಣೆ)ಯು ಕಾರ್ಯಾಧ್ಯಯನ ವರದಿಯಲ್ಲಿ 265 ಹೆಚ್ಚಿನ ಸಿಬ್ಬಂದಿಯನ್ನು ನೇಮಕಾತಿ ಮಾಡಿಕೊಳ್ಳಲು ಶಿಫಾರಸ್ಸು ಮಾಡಿರುತ್ತೆ. ವಿಮಾ ಇಲಾಖೆಯಲ್ಲಿ ಗಣಕೀಕರಣ ಮಾಡಿದರೆ, ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆಯು ಶಿಫಾರಸ್ಸು ಮಾಡಿರುವ ಹುದ್ದೆಗಳ ಅಗತ್ಯತೆ ಇಲ್ಲ. ಈ

ಕಾರಣ, ಇಲಾಖೆಯಲ್ಲಿ ಗಣಕೀಕರಣವನ್ನು ಅಳವಡಿಸುವ ಬಗ್ಗೆ ಉದ್ದೇಶಿಸಿದ್ದು, ಹೆಚ್ಚಿನ ಸಿಬ್ಬಂದಿಯನ್ನು ನೇಮಕ ಮಾಡಿಲ್ಲ.

ಅ) ಇಲ್ಲ.

ಇ) ಉದ್ಭವಿಸುವುದಿಲ್ಲ

ಬೆಂಗಳೂರು ನಗರ ಗ್ರಾಹಕ ಹಿತರಕ್ಷಣ ವೇದಿಕೆಯಲ್ಲಿ ಸ್ವೀಕೃತವಾಗಿರುವ ದೂರುಗಳ ಸಂಖ್ಯೆ

183 (1013) ಶ್ರೀ ಜಿ. ಪುಟ್ಟಸ್ವಾಮಿಗೌಡ (ಹೊಳೇನರಸೀಪುರ):–

ಆಹಾರ ಮತ್ತು ನಾಗರಿಕ ಸರಬರಾಜು ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) 1992ರ ಡಿಸೆಂಬರ್ ಅಂತ್ಯದವರೆಗೆ ಬೆಂಗಳೂರು ನಗರ ಗ್ರಾಹಕ ಹಿತರಕ್ಷಣ ವೇದಿಕೆಯಲ್ಲಿ ಸ್ವೀಕೃತವಾಗಿರುವ ಒಟ್ಟು ದೂರುಗಳ ಸಂಖ್ಯೆ ಎಷ್ಟು;

ಆ) ಬೆಂಗಳೂರು ನಗರದಲ್ಲಿ ಹೆಚ್ಚಿನ ಒತ್ತಡವಿರುವುದರಿಂದ, ಹೆಚ್ಚುವರಿ ಗ್ರಾಹಕ ಹಿತರಕ್ಷಣಾ ವೇದಿಕೆಯನ್ನು ಸ್ಥಾಪಿಸುವ ಪ್ರಸ್ತಾವನೆ ಏನಾದರೂ ಇದೆಯೆ;

ಇ) ಹಾಗಿದ್ದಲ್ಲಿ ಸಂಬಂಧಿಸಿದ ಕಾಯಿದೆಯನ್ನು ತಿದ್ದುಪಡಿ ಮಾಡಲು ಹಾಗೂ ಹೆಚ್ಚುವರಿ ವೇದಿಕೆಯನ್ನು ಬೆಂಗಳೂರಿನಲ್ಲಿ ಸ್ಥಾಪಿಸಲು ಅನುಮತಿಗಾಗಿ ಕೇಂದ್ರ ಸರ್ಕಾರಕ್ಕೆ ಬರಲಾಗಿದೆಯೆ ?

ಶ್ರೀಮತಿ ಮನೋರಮಾ ಮಧ್ವರಾಜ್ (ಆಹಾರ ಮತ್ತು ನಾಗರೀಕ ಸರಬರಾಜು ಸಚಿವರು):–

ಅ) 8,349

ಆ) ಬೆಂಗಳೂರಿನಲ್ಲಿ ಹೆಚ್ಚುವರಿ ವೇದಿಕೆಯನ್ನು ಸ್ಥಾಪಿಸುವ ಪ್ರಸ್ತಾವನೆ ಸದ್ಯಕ್ಕೆ ಸರ್ಕಾರದ ಪರಿಶೀಲನೆಯಲ್ಲಿ ಇಲ್ಲ.

ಇ) ಉದ್ಭವಿಸುವುದಿಲ್ಲ.

ಡಾ।। ರೋರಿಚ್ ತಾತಗುಣಿ ಎಸ್ಟೇಟ್

185 (1012) ಶ್ರೀ ಜಿ. ಪುಟ್ಟಸ್ವಾಮಿ ಗೌಡ (ಹೊಳೇನರಸೀಪುರ):–

ಕನ್ನಡ ಮತ್ತು ಸಂಸ್ಕೃತಿ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಡಾ।। ರೋರಿಚ್ ತಾತಗುಣಿ ಎಸ್ಟೇಟನ್ನು ವಶಕ್ಕೆ ತೆಗೆದುಕೊಂಡು ರಾಷ್ಟ್ರೀಯ ಕಲೆ ಮತ್ತು ಸಂಸ್ಕೃತಿ ಕೇಂದ್ರವನ್ನಾಗಿ ಮಾಡುವ ಪ್ರಸ್ತಾವನೆ ಇದೆಯೆ;

ಆ) ಹಾಗಿದ್ದಲ್ಲಿ ಸಿಗುವ ಭೂ ವಿಸ್ತೀರ್ಣವೆಷ್ಟು ?

ಶ್ರೀ ಹೆಚ್. ವಿಶ್ವನಾಥ್ (ಕನ್ನಡ ಮತ್ತು ಸಂಸ್ಕೃತಿ ರಾಜ್ಯ ಸಚಿವರು):–

ಅ) ಅಂತಹ ಪ್ರಸ್ತಾವನೆ ಈ ಇಲಾಖೆಯ ಮುಂದಿರುವುದಿಲ್ಲ.

ಆ) ಉದ್ಭವಿಸುವುದಿಲ್ಲ